ಶ್ರೀ ಜೆ. ಎಚ್. ಪಟೇಲ್.—ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ ನಿಮಗೆ ಜನರನ್ನು ವಿದ್ಯಾವಂತರನ್ನಾಗಿ ಮಾಡುವ ಇಚ್ಛೆಯಿಲ್ಲ, ಅವರು ವಿದ್ಯಾವಂತರಾದರೆ ನೀವು ಉಳಿಯುವುದಿಲ್ಲ ಎನ್ನುವ ಕಾರಣಕೋಸ್ಕರವಾಗಿ ಆ ಮಕ್ಕಳನ್ನು ಅವಿದ್ಯಾವಂತರನ್ನಾಗಿ ಮಾಡುತ್ತಿದ್ದೀರಿ ಎನ್ನುವ ಮಾತನ್ನು ಒಪ್ಪುತ್ತೀರಾ ?

ಶ್ರೀಮತಿ ನಾಗಮ್ಮ ಕೇಶವಮೂರ್ತಿ.—ಸ್ವಾಮಿ, ನಾನು ಈ ಒಂದು ಪ್ರಶ್ನೆಗೆ ಉತ್ತರ ಹೇಳುವುದಿಲ್ಲ. ಇದು ಇಡೀ ರಾಜ್ಯಕ್ಕೆ ಗೊತ್ತಿರತಕ್ಕದ್ದು. ವಿದ್ಯಾ ಕ್ಷೇತ್ರದಲ್ಲಿ ನಮ್ಮ ರಾಜ್ಯವು ಸಾಕಷ್ಟು ಪ್ರಗತಿಯನ್ನು ಸಾಧಿಸಿದ್ದೇವೆ. ಆದುದರಿಂದ ನಾವು ವಿದ್ಯೆಗೋಸ್ಕರವಾಗಿ ಪ್ರೋತ್ಸಾಹವನ್ನು ಕೊಡುತ್ತಿಲ್ಲವೆಂದು ಹೇಳತಕ್ಕ ಮಾತು ಸರಿಯಲ್ಲ. ಇತ್ತೀಚೆಗೆ ಮಾನ್ಯ ಸದಸ್ಯರಾದ ಶ್ರೀ ಪಟೇಲ್‌ರವರು ತಮ್ಮ ಕ್ಷೇತ್ರದಲ್ಲಿ ಒಂದು ಹೈಸ್ಕೂಲ್ ಬೇಕು ಬೇಕು ಎಂದು ಒತ್ತಾಯ ಮಾಡುತ್ತಿದ್ದರು. ಅದಕ್ಕೆ ನಾವು ಅಲ್ಲಿಗೆ ಒಂದು ಹೈಸ್ಕೂಲನ್ನು ಸಹ ಮಂಜೂರು ಮಾಡಿಕೊಟ್ಟಿದ್ದೇವೆ. ಇದರಿಂದ ವಿದ್ಯೆ ಅಲ್ಲಿ ಪ್ರಗತಿ ಆಗುವುದಕ್ಕೆ ಸಾಧ್ಯತೆ ಇಲ್ಲವೆ ?

ಶ್ರೀ ಕೆ. ಪ್ರಭಾಕರ್.—ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ಜಾರಿಗೆ ತರುವುದಕ್ಕೆ ಸಾಮಾಜಿಕ ಸಮಸ್ಯೆಗಳು ಅಡ್ಡಿ ಇದೆ ಎಂದು ಹೇಳಿದ್ದೀರಿ, ಆ ರೀತಿಯಾಗಿ ಸಾಮಾಜಿಕವಾಗಿ ಸಮಸ್ಯೆಗಳು ಅಡ್ಡಿಯಾಗಿರತಕ್ಕಂಥವುಗಳು ಯಾವುವು ಎಂಬುದನ್ನು ಹೇಳುತ್ತೀರಾ ?

ಶ್ರೀಮತಿ ನಾಗಮ್ಮ ಕೇಶವಮೂರ್ತಿ.—ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳು ಎಂದು ಹೇಳಿದರೆ ಮನೆಯಲ್ಲಿ ಹೆಚ್ಚು ಮಕ್ಕಳು ಇರುವುದು ಅಂದರೆ ಕುಟುಂಬ ಯೋಜನೆಯನ್ನು ಆಚರಣೆ ಮಾಡದೇ ಇರುವುದು ಒಂದು ಕಾರಣವಾಗಿದೆ ಎಂದು ಹೇಳಬಹುದು. ಮಕ್ಕಳನ್ನು ಶಾಲೆಗೆ ಕಳುಹಿಸದೇ ಇರುವುದರ ಬಗ್ಗೆ ನಾವು ಹಳ್ಳಿಗಳಲ್ಲಿ ಕೇಳಿದಾಗ ನನ್ನ ಮಗಳು ಶಾಲೆಗೆ ಹೋದರೆ ಇನ್ನು ಚಿಕ್ಕ ೨—೩ ಮಕ್ಕಳನ್ನು ನೋಡಿಕೊಳ್ಳುವವರು ಯಾರು ಎಂದು ಹೇಳುತ್ತಾರೆ. ಈ ಎಲ್ಲಾ ಕಾರಣಗಳಿಂದ ಈ ಒಂದು ಕಡ್ಡಾಯ ಶಿಕ್ಷಣ ನಾನು ಮೊದಲೇ ಹೇಳಿದ ಹಾಗೆ ಮೊದಲನೆಯ ತರಗತಿಯಲ್ಲಿ ಸಾಕಷ್ಟು ಎನ್‌ರೋಲ್‌ಮೆಂಟ್ ಆಗಿದೆ ಇದು ಬೇರೆ ರಾಜ್ಯಗಳಿಗಿಂತ ಚೆನ್ನಾಗಿ ಆಗಿದೆ ಎಂದು ಸಂತೋಷದಿಂದ ಹೇಳುತ್ತಿದ್ದೇನೆ ಆದರೆ ಇದರಲ್ಲಿರತಕ್ಕ ಡ್ರಾಪ್ ಔಟ್ಸ್ ಏನಿದೆ ಅದನ್ನು ಸರಿಪಡಿಸುವುದಕ್ಕೂ ಸಹ ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

**Supply of Drinking Water to Mudabidari town Dakshina Kannada District.**

(655) SRI K. RAMA BHAT (Puttur)—Will the Minister for Housiug and Urban Development be pleased to state:—

(a) the measures taken by the Government to supply drinking water to Mudabidare Town in Dakshina Kannada District;

(b) the cost of this project;

(c) when drinking water would be supplied to Mudabidare town ?

SRI DHARAM SINGH.—Minister for Housing and Urban Development.

(a) 1) The Water Supply Scheme to Mudabidari Town was commissioned during the year 1972.

2) During the Mahamastakabhisheka of Shravanabelagola, augmentation of existing Water Supply Scheme was takeu up Sri Bore-wells were drilled to cater to the needs of pilgrms.

3) There is also a proposal to draw water from the Hosangadi river with extension of distribution system and zonal reservoirs.

(b) 1) The cost of the originally sanctioned scheme is Rs. 2.85 Lakshs. The cost as per actual is Rs. 3.01 Lakhs. The Water Supply arrangements to pilgrims at Moodabidri during Mahamastakabhisheka of Shravanabelgola has costed Rs. 7.00 Lakas.

2) Augmentation proposals with Hosangadi River as source-cost Rs. 71.50 Lakhs.

(c) Water Supply Scheme is functioning since 1972 in Moodabidri Town, with Bore-wells as source and it was increased to 6 Nos. of Bore-wells in 1981.

ಶ್ರೀ ಕೆ. ರಾಮಭಟ್,— ಮೂಡ ಬಿದರೆ ಜನರಿಗೆ ಎಷ್ಟು ಗ್ಯಾಲನ್ ನೀರನ್ನು ಸರಬರಾಜು ಮಾಡುತ್ತಿದ್ದೀರಿ ? ಮತ್ತು ಎಷ್ಟು ಜನಸಂಖ್ಯೆ ಇದೆ ?

ಶ್ರೀ ಧರ್ಮಸಿಂಗ್.—ಜನಸಂಖ್ಯೆಯು ೧೯೮೧ ರ ಸೆನ್ಸಸ್ ಪ್ರಕಾರ ೧೩ ೫೭೮ ಆಗಿದೆ. ಈಗ ನಾವು ಪ್ರತಿ ದಿನಕ್ಕೆ ಒಬ್ಬರಿಗೆ ೆ ಗ್ಯಾಲನ್ ನೀರನ್ನು ಸರಬರಾಜು ಮಾಡುತ್ತಿದ್ದೇವೆ.

ಶ್ರೀ ಕೆ. ರಾಮಭಟ್.—ನಿಮ್ಮ ಒಂದು ನಿಯಮದ ಪ್ರಕಾರವೇ ಒಬ್ಬರಿಗೆ ಸುಮಾರು ೩೦ ಗ್ಯಾಲನ್ ನೀರನ್ನು ಕೊಡಬೇಕೆಂದು ಇದೆ ಇದಕ್ಕೆ ಏನು ವ್ಯವಸ್ಥೆಯನ್ನು ತಾವು ಮಾಡುತ್ತಿದ್ದೀರಿ ?

ಶ್ರೀ ಧರ್ಮಸಿಂಗ್.—೧೯೭೨ ರಲ್ಲಿ ಈ ಯೋಜನೆಯನ್ನು ನಾವು ಪ್ರಾರಂಭ ಮಾಡಿದ್ದೆವು, ಆಲ್ಲಿ ಬೋರ್‌ವೆಲ್ಸ್‌ಗಳನ್ನು ಹಾಕಿ ೆ ಗ್ಯಾಲನ್‌ಗಳ ನೀರನ್ನು ಸರಬರಾಜು ಮಾಡುತ್ತಿದ್ದೆವೆ. ಆದರೆ ಮೊನ್ನೆ ಮಹಾ ಮಸ್ತಕಾಭಿಷೇಕದ ಕಾಲದಲ್ಲಿ ೬ ಬೋರ್‌ವೆಲ್‌ಗಳನ್ನು ತೆಗೆಸಿ ಈಗ ೨೮ ಗ್ಯಾಲನ್‌ಗಳ ನೀರನ್ನು ಕೊಡುತ್ತಿದ್ದೇವೆ. ಇದಕ್ಕಾಗಿ ೭ ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದೇವೆ. ಹೀಗಾಗಿ ಪ್ರತಿ ಕುಟುಂಬಕ್ಕೆ ೨೮ ಗ್ಯಾಲನ್ ನೀರನ್ನು ಕೊಡುತ್ತಿದ್ದೇವೆ.

ಶ್ರೀ ಕೆ. ರಾಮಭಟ್ —ಬೋರ್‌ವೆಲ್ಸ್‌ಗಳನ್ನು ಹಾಕಿಸಿದ್ದೀರಿ, ಆದರೆ ಆಲ್ಲಿ ಓವರ್ ಹೆಡ್ ಟ್ಯಾಂಕ್ಸ್‌ಗಳನ್ನು ಮಾಡಿಲ್ಲವೆಂದು ಆಲ್ಲಿಯ ಜನಗಳು ತಿಳಿಸಿದ್ದಾರೆ. ಓವರ್ ಹೆಡ್ ಟ್ಯಾಂಕ್‌ಗಳಿಲ್ಲದೇ ನೇರವಾಗಿ ನೀರನ್ನು ಒದಗಿಸುತ್ತಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಇದಕ್ಕೆ ತಾವು ಏನು ವ್ಯವಸ್ಥೆಯನ್ನು ಮಾಡುತ್ತೀರಾ ?

ಶ್ರೀ ಧರ್ಮಸಿಂಗ್.—ನಾನ್ನು ಆಗಲೇ ಹೇಳಿದ ಹಾಗೆ ೧೯೮೧ ರಲ್ಲಿ ಏನು ಜನಸಂಖ್ಯೆಯಾಗಿದೆ ಮತ್ತೆ ಮುಂದೆ ೨೦೦೦ ಎ. ಡಿ. ಆಷ್ಟು ಹೊತಿಗೆ ಏನು ಜನಸಂಖ್ಯೆಯಾಗಿರುತ್ತದೆ ಎಂಬುದನ್ನೆಲ್ಲಾ ಗಮನದಲ್ಲಿಟ್ಟುಕೊಂಡೇ ಹೊಸಂಗಡಿ ನದಿಯಿಂದ ನೀರನ್ನು ತಂದು ಜನರಿಗೆ ನೀರು ಸರಬರಾಜು ಮಾಡುವ ಬಗ್ಗೆ ೮೪ ಲಕ್ಷ ರೂ.ಗಳ ಒಂದು ಯೋಜನೆಯನ್ನು ಈಗಾಗಲೇ ತಯಾರು ಮಾಡಿದ್ದೇವೆ. ಡಿಸ್ಟ್ರಿಬ್ಯೂಷನ್ ಪೈಪ್ಲೈನ್‌ಗಿಲ್ಲವೆಂದು ಹೇಳಿದ್ದೀರಿ ಅದನ್ನೂ ಸಹ ನಾವು ಗಮನದಲ್ಲಿಟ್ಟು ಕೊಂಡಿದ್ದೇವೆ ಮತ್ತು ಓವರ್ ಹೆಡ್ ಟ್ಯಾಂಕ್‌ಗಳು ಇಲ್ಲವೆಂದು ಹೇಳಿದ್ದೀರಿ ಅದನ್ನು ಸಹ ಗಮನದಲ್ಲಿಟ್ಟುಕೊಂಡೇ ಈ ೮೪ ಲಕ್ಷ ರೂ.ಗಳ ಯೋಜನೆಯನ್ನು ಮಾಡಿದ್ದೇವೆ. ಮತ್ತು ಇದರ ಬಗ್ಗೆ ಆಲ್ಲಿಯ ಪುರಸಭೆಯವರಿಂದ ಒಂದು ರೆಜಲ್ಯೂಷನ್ ಪಾಸ್ ಮಾಡಿ ಕೊಡಿ ಎಂದು ಕೇಳಿದ್ದೇವೆ. ಅದು ಬಂದ ಕೂಡಲೆ ನಾವು ಸೂಕ್ತ ಕ್ರಮವನ್ನು ಕೈಗೊಳ್ಳುತ್ತೇವೆ.

**Licences issued for two Wheelers.**

721 D. JAYADEVARAJ URS (Chamundeshwari).—Will the Minister of Transport and Minor Irrigation be pleased to state.—

(a) the kinds of two wheelers (Scooters, Mopeds etc.,) for which Licences have been issued to ply on the roads in Karnataka State ;